ವಿ-72-(50)

<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಿ.ಎಂ. ಫಾರೂಕ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ</u>

-- o --

<u>ವಿಷಯ</u>

ಬೈಕಂಪಾಡಿ ಇಂಡಸ್ಟ್ರಿಯಲ್ ವಲಯ – ಕುದುರೆಮುಖ ಇಂಡಸ್ಟ್ರಿಯಲ್ ವಲಯದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ MRPL ಗಾಗಿರುವ ODC ರಸ್ತೆಯು ಬಹಳ ಕಿರಿದಾಗಿದ್ದು, ಈ ರಸ್ತೆಯ ಬದಿಯಲ್ಲಿ ವಿವಿಧ ಪೆಟ್ರೋಲಿಯಂ ಕಂಪನಿಗಳ ಹಾಗೂ ಕ್ರೂಡ್ ಆಯಿಲ್ ಪೈಪ್ ಲೈನ್ ಅನ್ನು ರಾಕ್ ಸಿಸ್ಟಂ ಮಾಡಿ ಬಹಳ ಅಪಾಯಕಾರಿಯಾಗಿ ಅಳವಡಿಸಲಾಗಿರುತ್ತದೆ. ಅಲ್ಲದೆ ತುಂಬಾ ಹಾಳಾಗಿರುವ ಈ ರಸ್ತೆಯನ್ನು ದುರಸ್ತಿ ಮತ್ತು ಚರಂಡಿ ವ್ಯವಸ್ಥೆಗೊಳಿಸಿರುವುದಿಲ್ಲ ಹಾಗೂ ರಸ್ತೆಯ ಪಕ್ಕ ವಿದ್ಯುತ್ ದೀಪಗಳನ್ನು ಅಳವಡಿಸದಿರುವುದರಿಂದ ಇಲ್ಲಿ ಆಗಾಗ್ಗೆ ಅಪಘಾತಗಳು ಸಂಭವಿಸುತ್ತಿರುವುದರಿಂದ ಇಲ್ಲಿ ಸಾರ್ವಜನಿಕರು ಓಡಾಡುವುದು ಅತ್ಯಂತ ಕಷ್ಟಕರವಾಗಿದೆ. ಜೋಕಟ್ಟೆ ತೂಕೂರು ಗ್ರಾಮದಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಹೋಗುವ ಈ ರಸ್ತೆ ಅತ್ಯಂತ ಸೂಕ್ಷ್ಮ ರಸ್ತೆಯಾಗಿದ್ದು, ಇದು ಕೆ.ಐ.ಎ.ಡಿ.ಬಿ. ವ್ಯಾಪ್ತಿಗೆ ಒಳಪಡುತ್ತದೆ. ಸಾರ್ವಜನಿಕ ಹಾಗೂ ವಿವಿಧ ಕಂಪನಿಗಳ ವಾಹನಗಳು ಸುಲಭ ಸಂಚಾರದ ದೃಷ್ಟಿಯಿಂದ ಕುಲೂರ ಬ್ರಿಡ್ಜ್ ನಿಂದ ಜೋ-ಕಟ್ಟೆಯವರೆಗಿನ ರಸ್ತೆಯನ್ನು ಕೆ.ಐ.ಎ.ಡಿ.ಬಿ. ವತಿಯಿಂದ 4 ಪಥಗಳ ರಸ್ತೆಯಾಗಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

<u>ಉತ್ತರ</u>

M/s. MRPL ರವರ Over Dimensional Cargo ರಸ್ತೆ ಮತ್ತು ಪೈಪ್ ಲೈನ್ ಕಾರಿಡಾರ್‌ಗಾಗಿ ಮಂಗಳೂರು ತಾಲ್ಲೂಕು, ಬೈಕಂಪಾಡಿ ಮತ್ತು 62-ತೋಕೂರು ಗ್ರಾಮದ ವಿವಿಧ ಸರ್ವೆ ನಂಬರುಗಳ ಪೈಕಿ 9.17 ಎಕರೆ ಜಮೀನನ್ನು ರಸ್ತೆ ಸಂಪರ್ಕ ಕಲ್ಪಿಸುವ ಸಲುವಾಗಿ ಹಂಚಿಕೆ ಮಾಡಲಾಗಿದ್ದು, ದಿನಾಂಕ: 08.12.1998 ರಲ್ಲಿ ಸ್ವಾಧೀನ ಪತ್ರ ಹಾಗೂ ದಿನಾಂಕ: 08.03.1999 ರಂದು ಗುತ್ತಿಗೆ ಕರಾರು ಪತ್ರವನ್ನು ನೀಡಲಾಗಿದೆ. ಅದರಂತೆ M/s. MRPL ಸಂಸ್ಥೆಯವರು ರಸ್ತೆಯನ್ನು ನಿರ್ಮಿಸಿ, ಬಳಕೆ ಮಾಡುತ್ತಿರುತ್ತಾರೆ.

ಮೇಲಿನಂತೆ ಹಂಚಿಕೆ ಮಾಡಿರುವ ಜಮೀನಿನಲ್ಲಿ ಕೂಳೂರು ಸೇತುವೆ ಸಮೀಪದಿಂದ (ರಾಷ್ಟ್ರೀಯ ಹೆದ್ದಾರಿ-66) ಜೋಕಟ್ಟೆ ವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು M/s. MRPL ಸಂಸ್ಥೆಯವರು ನಿರ್ಮಿಸಿದ್ದು, ಈ ರಸ್ತೆಯನ್ನು ನಿರ್ವಹಣೆ ಮಾಡಲು ಹಾಗೂ ವಾಹನ ದಟ್ಟಣೆಗೆ ಅನುಗುಣವಾಗಿ ರಸ್ತೆಯನ್ನು ಮರು ಅಭಿವೃದ್ಧಿಪಡಿಸುವ ಕುರಿತು ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿ ದಿನಾಂಕ: 02.12.2021 ರಂದು M/s. MRPL ಸಂಸ್ಥೆಗೆ ಪತ್ರ ಬರೆಯಲಾಗಿದೆ.

ಸಂಖ್ಯೆ: ಸಿಐ 254 ಐಎಪಿ (ಇ) 2021

(ಮುರುಗೇಶ್ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು